ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)


ಅಧ್ಯಕ್ಷರು, ಆಯ್ಕೆ ಪ್ರಾಧಿಕಾರ ಮತ್ತು ನೇಮಕಾತಿ ಪ್ರಾಧಿಕಾರ ಹಾಗೂ ಜಿಲ್ಲಾಧಿಕಾರಿಗಳು, ಜಿಲ್ಲಾಧಿಕಾರಿಗಳ ಕಾರ್ಯಾಲಯ, ಮೈಸೂರು ಜಿಲ್ಲೆ. ಮೈಸೂರು.

ದೂರವಾಣಿ ಸಂಖ್ಯೆ:0821-2424079,2422110,2428383

ಫ್ಯಾಕ್ಸ್ ನಂ : 2429012 & 2428383 E-Mail deo.mysore@gmail.com


**ಸಂಖ್ಯೆ : MYSDC-EST2/VA(15)/2/2017** **ದಿನಾಂಕ: 22 /8/2017**

## ಅಧಿಕೃತ ಜ್ಞಾಪನ

ವಿಷಯ: 2016-17 ನೇ ಸಾಲಿನಲ್ಲಿ ಗ್ರಾಮಲೆಕ್ಕಿಗರ ನೇಮಕಾತಿ ಸಂಬಂಧ ಅಭ್ಯರ್ಥಿಗಳ ದಾಖಲಾತಿ ಪರಿಶೀಲನೆ ಮಾಡುವ ಬಗ್ಗೆ

ಉಲ್ಲೇಖ:1) ಈ ಕಛೇರಿಯ ಅಧಿಸೂಚನೆ ಸಂಖ್ಯೆ ವಿಎ ಇ.ಎಸ್.ಟಿ 84/2016-17 ದಿನಾಂಕ: 06/12/2016

2) ಈ ಕಛೇರಿಯ ಅಧಿಕೃತ ಜ್ಞಾಪನ ಸಮಸಂಖ್ಯೆ ದಿನಾಂಕ: 04/07/2017

3) ಈ ಕಾರ್ಯಾಲಯದ ತಿಳುವಳಿಕೆ ಪತ್ರ ಸಂಖ್ಯೆ MYSDC-EST2/VA(15)/3/2017 ದಿನಾಕ: /08/2017

****

2016-17 ನೇ ಸಾಲಿನ ಮೈಸೂರು ಜಿಲ್ಲಾ ಕಂದಾಯ ಘಟಕದ ಗ್ರಾಮಲೆಕ್ಕಿಗರ ಹುದ್ದೆಗಳನ್ನು ನೇರ ನೇಮಕಾತಿ 105 ಗ್ರಾಮಲೆಕ್ಕಿಗರ ಹುದ್ದೆಗಳನ್ನು ಭರ್ತಿ ಮಾಡಲು ಉಲ್ಲೇಖ (1) ರಂತೆ ಅಧಿಸೂಚನೆ ಹೊರಡಿಸಿ, 105, ಹುದ್ದೆಗಳಿಗೆ ಅನುಗುಣವಾಗಿ 1 : 5 ಅನುಪಾತದಲ್ಲಿ ತಾತ್ಕಾಲಿಕ ಪರಿಶೀಲನಾ ಪಟ್ಟಿಯನ್ನು ಉಲ್ಲೇಖ (2) ರಂತೆ ಪ್ರಕಟಿಸಲಾಗಿದೆ. ಸದರಿ ತಾತ್ಕಾಲಿಕ ಪರಿಶೀಲನಾ ಪಟ್ಟಿಗೆ ಸಲ್ಲಿಸಿರುವ ಆಕ್ಷೇಪಣೆಗಳಿಗೆ ಉಲ್ಲೇಖ (3) ರಂತೆ ತಿಳುವಳಿಕೆ ನೀಡಲಾಗಿದೆ.

ಉಲ್ಲೇಖ (2) ರ ತಾತ್ಕಾಲಿಕ ಪರಿಶೀಲನಾ ಪಟ್ಟಿಯಲ್ಲಿನ ಅಭ್ಯರ್ಥಿಗಳ ದಾಖಲಾತಿಗಳನ್ನು ಪರಿಶೀಲನೆ ಮಾಡಲು ಈ ಕೆಳಕಂಡ ದಿನಾಂಕಗಳಂದು ದಾಖಲಾತಿ ಪರಿಶೀಲನಾ ಕಾರ್ಯವನ್ನು ನಡೆಸಲು ನಿಗಧಿಪಡಿಸಲಾಗಿದೆ. ಆದ್ದರಿಂದ ಸಂಬಂಧಪಟ್ಟ ಅಭ್ಯರ್ಥಿಗಳು ಎಲ್ಲಾ ಅವಶ್ಯಕ ಮೂಲ ದಾಖಲಾತಿಗಳು ಹಾಗೂ ದ್ವಿಪ್ರತಿಯಲ್ಲಿ ದೃಡೀಕೃತ ದಾಖಲೆಗಳೊಂದಿಗೆ ಈ ಕೆಳಕಂಡ ನಿಗಧಿಪಡಿಸಿದ ದಿನಾಂಕದಂದು ಕಛೇರಿ ವೇಳೆಯಲ್ಲಿ **"ಜಿಲ್ಲಾಧಿಕಾರಿಗಳ ಕಛೇರಿ, ಮೈಸೂರು ಜಿಲ್ಲೆ, ಝಾನ್ಸಿಲಕ್ಷ್ಮೀಭಾಯಿ ರಸ್ತೆ, ಮೈಸೂರು"** ಇಲ್ಲಿ ಪರಿಶೀಲನೆಗೆ ಹಾಜರಾಗುವುದು. ನಿಗಧಿತ ದಿನಾಂಕದಂದು ನಿಗಧಿಪಡಿಸಿರುವ ಕಛೇರಿ ವೇಳೆಯಲ್ಲಿ ಹಾಜರಾಗದೇ ಇರುವ ಅಭ್ಯರ್ಥಿಗಳ ಅರ್ಜಿಗಳನ್ನು ಯಾವುದೇ ಮುನ್ಸೂಚನೆ ನೀಡದೇ ತಿರಸ್ಕರಿಸಲಾಗುವುದು.

.....2

| ಕ್ರ.ಸಂ | ಅಭ್ಯರ್ಥಿಗಳು ಆಯ್ಕೆಯಾದ ಮೀಸಲಾತಿ | ತಾತ್ಕಾಲಿಕ ಪರಿಶೀಲನಾ ಪಟ್ಟಿಯ ಕ್ರಮ ಸಂಖ್ಯೆ | ದಿನಾಂಕ |
|---|---|---|---|
| 1. | ಪರಿಶಿಷ್ಟ ಜಾತಿ | 01 ರಿಂದ 100 | 04/09/2017 ( 10-00 AM to 5-30 PM) |
| 2. | ಪರಿಶಿಷ್ಟ ಪಂಗಂಡ | 01 ರಿಂದ 15 | 05/09/2017 ( 10-00 AM to 5-30 PM) |
| | 2 ಎ | 01 ರಿಂದ 75 | |
| | 3 ಬಿ | 01 ರಿಂದ 25 | |
| 3. | ಪ್ರವರ್ಗ 1 | 01 ರಿಂದ 20 | 06/09/2017 ( 10-00 AM to 5-30 PM) |
| | 2 ಬಿ | 01 ರಿಂದ 20 | |
| | 3 ಎ | 01 ರಿಂದ 20 | |
| 4. | ಸಾಮಾನ್ಯ | 01 ರಿಂದ 125 | 07/09/2017 ( 10-00 AM to 5-30 PM) |
| | | 126 ರಿಂದ 250 | 08/09/2017 ( 10-00 AM to 5-30 PM) |

ಕ.ಟಿ.ಅ.ಮೇ)

ಸದಸ್ಯ ಕಾರ್ಯದರ್ಶಿ
ಆಯ್ಕೆ ಪ್ರಾಧಿಕಾರ ಹಾಗೂ ನೇಮಕಾತಿ ಪ್ರಾಧಿಕಾರ,
ಮತ್ತು ಅಪರ ಜಿಲ್ಲಾಧಿಕಾರಿ
ಮೈಸೂರು ಜಿಲ್ಲೆ, ಮೈಸೂರು.

ಪ್ರತಿಯನ್ನು: ಈ ಕೆಳಕಂಡವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ / ಕಳುಹಿಸಿದೆ.

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂಧಾಯ ಇಲಾಖೆ(ಸೇವೆಗಳು0 ಬಹುಮಹಡಿಗಳ ಕಟ್ಟಡ, ಬೆಂಗಳೂರು
2. ಪ್ರಾದೇಶಿಕ ಆಯುಕ್ತರು , ಮೈಸೂರು ವಿಭಾಗ, ಮೈಸೂರು
3. ರಾಷ್ಟ್ರೀಯ ಸೂಚನಾ ವಿಜ್ಞಾನಾಧಿಕಾರಿಗಳು, ರಾಷ್ಟ್ರೀಯ ಸೂಚನಾ ವಿಜ್ಞಾನ ಕೇಂದ್ರ, ಜಿಲ್ಲಾ ಪಂಚಾಯತ್, ಮೈಸೂರು ಇವರಿಗೆ ಸದರಿ ಅಧಿಕೃತ ಜ್ಞಾಪನಾ ಹಾಗೂ ಪಟ್ಟಿಯನ್ನು ವೆಬ್ ಸೈಟ್ ನಲ್ಲಿ ಪ್ರಕಟಿಸಲು ಕೋರಿದೆ.
4. ಜಿಲ್ಲೆಯ ಎಲ್ಲಾ ಉಪವಿಭಾಗಾಧಿಕಾರಿಗಳು / ತಹಸೀಲ್ದಾರ್ ರವರಿಗೆ ಕಳುಹಿಸುತ್ತಾ ಅಧಿಕೃತ ಜ್ಞಾಪನಾವನ್ನು ಪ್ರಕಟಣಾ ಫಲಕದಲ್ಲಿ ಪ್ರಕಟಿಸಲು ತಿಳಿಸಿದೆ.
5. ಈ ಕಛೇರಿಯ ಪ್ರಕಟಣಾ ಫಲಕದಲ್ಲಿ ಪ್ರಕಟಿಸಲು.
6. ಕಛೇರಿ ಪ್ರತಿ.